ದಿಃ 20.06.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 11 ಮತ್ತು 12 ನೇ ಪ್ರತಿವಾದಿ ಪರ ವಕೀಲರಿಂದಃ ಶ್ರೀ ಜೆ.ಎನ್ ಎಂ. ರವರಿಂದಃ**

ಬಿ. ವೆಂಕಟರೆಡ್ಡಿ ಅವರ ಮಗ ಆದಿನಾರಾಯಣರೆಡ್ಡಿ ರವರು ಜೀವಂತವಾಗಿದ್ದಾರೆ. ಬಿ ವೆಂಕಟರೆಡ್ಡಿ ಅವರ ಮಗ ಬಿ.ವಿ. ಸೂರ್ಯನಾರಾಯಣರೆಡ್ಡಿ ಎಂದರೆ ಸರಿ. ಆರ್. ಸೂರ್ಯನಾರಾಯಣರೆಡ್ಡಿ ರವರು ನರಸಿಂಹರೆಡ್ಡಿ ರವರ ಮಗ ಎಂದರೆ ಸರಿ. ನನ್ನ ತಾತನ ಹೆಸರು ಗಂಗುಲಪ್ಪ. ಅಜ್ಜಿ ಹೆಸರು ಗಂಗಮ್ಮ. ವಾದಿ ಮತ್ತು ಪ್ರತಿವಾದಿಗಳು ಈಗಲೂ ಒಂದೇ ಕುಟುಂಬದಲ್ಲಿ ಇದ್ದೇವೆ. 3 ನೇ ದಾವಾ ಅನುಸೂಚಿತ ಸ್ವತ್ತಿನ ಸರ್ವೇ ನಂ. 47/2 ರ ಚೆಕ್ಕುಬಂದಿ ಪೂಃಕ್ಕೆ ಮಂಜುನಾಥ ರೆಡ್ಡಿ ರವರ ಸ್ವತ್ತು (1 ನೇ ಪ್ರತಿವಾದಿ). ಸರ್ವೇ ನಂ. 47/2 ರಲ್ಲಿ 1 ನೇ ಪ್ರತಿವಾದಿ ಯ ಸ್ವತ್ತು ಇದೆ. ಪಃಕ್ಕೆ ಸೂರ್ಯನಾರಾಯರೆಡ್ಡಿ ರವರ ಸ್ವತು. ಸೂರ್ಯನಾರಾಯರೆಡ್ಡಿ ರವರ ತಂದೆಯ ಹೆಸರು ಗೊತ್ತಿಲ್ಲ. ಉಃಕ್ಕೆ ಮಂಜುನಾಥ ರೆಡ್ಡಿ ರವರ ಸ್ವತ್ತು, ದಃಕ್ಕೆ ರಾಮಲಿಂಗರೆಡ್ಡಿ ರವರ ಸ್ವತ್ತು.

2. 1 ನೇ ಪ್ರತಿವಾದಿ ಪೂರ್ವಕ್ಕೆ 6 ಗುಂಟೆ ಜಮೀನಿನಲ್ಲಿ ಇದ್ದಾರೆ. ಪ್ರಸಕ್ತ ನಾನು ಬೆಂಗಳೂರಿನಲ್ಲಿ ವಾಸವಿದ್ದೇನೆ. 19 ವರ್ಷಗಳಿಂದ ಬೆಂಗಳೂರಿನಲ್ಲಿ ಇದ್ದೇನೆ. ನಾನು ಮತ್ತು 1 ನೇ ವಾದಿ ಬೆಂಗಳೂರಿನಲ್ಲಿ ವಾಸವಿದ್ದೇನೆ. 3 ನೇ ದಾವಾ ಸ್ವತ್ತು ಸರ್ವೇ ನಂ 47/2 ಕ್ಕೆ ಕಂದಾಯ ಕಟ್ಟಿಲ್ಲ. ಗಂಗಪ್ಪ ರವರ 3 ನೇ ಮಗನ ಹೆಸರು ಬೈಯ್ಯರೆಡ್ಡಿ . ಬೈಯ್ಯರೆಡ್ಡಿ ನನ್ನ ದೊಡ್ಡಪ್ಪ. ಗಂಗಪ್ಪ ನ 3 ನೇ ಮಗನ ಹೆಸರು ಶಿವರೆಡ್ಡಿ ಇದ್ದು ಬೈಯ್ಯರೆಡ್ಡಿ ಅಲ್ಲ ಎಂದರೆ ಸರಿಯಲ್ಲ. ಸರ್ವೇ ನಂ 47/2 ಜಮೀನಿನ ಖಾತೆ ಶಿವರೆಡ್ಡಿ ರವರ ಹೆಸರಿನಲ್ಲಿದೆ.

3. ನಂಜಿರೆಡ್ಡಿ ರವರ ಹೆಂಡತಿ ಅಶ್ವಥಮ್ಮ ನ ಹೆಸರಿಗೆ ಯಾವ ಸ್ವತ್ತು ಇದೆ ಎಂದು ಹೇಳಲಾಗುವುದಿಲ್ಲ. ಗಂಗಪ್ಪನ ಹೆಸರಿಗೆ ಯಾವ ಸರ್ವೇ ನಂ. ಖಾತೆ ಆಗಿದೆ ಎಂದು

ಗೊತ್ತಿಲ್ಲ. ದಾವಾ ಸ್ವತ್ತುಗಳನ್ನು ನಾವು ಒಟ್ಟಿಗೆ ಉಳಿಮೆ ಮಾಡುತ್ತಿದ್ದೇವೆ. ಎಲ್ಲಾ ಸರ್ವೇ ನಂ ನಲ್ಲಿ ಸ್ವತ್ತುಗಳಿಗೆ ಬಂದ ಫಲವನ್ನು 5 ಭಾಗಗಾಳಾಗಿ ನಾವು ಹಂಚಿಕೊಳ್ಳುತ್ತೇವೆ. ಸರ್ವೇ ನಂ 5 ರಲ್ಲಿ ಪಾಯ ಹಾಕಲಾಗಿರುತ್ತದೆ. ಸರ್ವೇ ನಂ 5 ರಲ್ಲಿ 6 ½ ಗುಂಟೆ ಯಲ್ಲಿ 4-5 ವರ್ಷಗಳ ಹಿಂದೆ 12 ನೇ ಪ್ರತಿವಾದಿ ಪಾಯ ಹಾಕಿರುತ್ತಾರೆ.

**4.** ಪಾಯ ಹಾಕುವಾಗ ನಾವು ಅಡ್ಡಿ ಪಡಿಸಿರುತ್ತೇವೆ. ಲಾಯರ್ ಮುಖಾಂತರ ನೋಟೀಸ್ ನೀಡಿದ್ದೇವೆ. ಲಾಯರ್ ಮುಖಾಂತರ ನೋಟೀಸ್ ನೀಡಿಲ್ಲ ಎಂದರೆ ಸರಿಯಲ್ಲ. ರಾಮಚಂದ್ರ ರೆಡ್ಡಿ ರವರು ನನ್ನ ಚಿಕ್ಕಪ್ಪ. ಈಗ ಅವರು ಜೀವಂತವಿಲ್ಲ. ದಿಃ 18.10.1994 ರಲ್ಲಿ ವೆಂಕಟರೆಡ್ಡಿ ರವರ ಮಗ ರಾಮಚಂದ್ರರೆಡ್ಡಿ ರವರಿಗೆ ಗಂಗಪ್ಪರವರ ಮಗ ರಾಮಚಂದ್ರ ರೆಡ್ಡಿ ಸರ್ವೇ ನಂ. 47/2 ರಲ್ಲಿ 6 ಗುಂಟೆ ಜಮೀನನ್ನು 1500/- ರೂಗಳಿಗೆ ರಾಮಚಂದ್ರರೆಡ್ಡಿ ಭಾಗವನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ರಾಮಚಂದ್ರರೆಡ್ಡಿ ರವರಿಗೆ 6 ಗುಂಟೆಗೆ ಸಂಬಂಧಿಸಿದಂತೆ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ.

**5.** 16.04. 2001 ರಲ್ಲಿ ರಾಮಚಂದ್ರ ರೆಡ್ಡಿ ರವರ ತಮ್ಮ 11 ನೇ ಪ್ರತಿವಾದಿಗೆ 6 ಗುಂಟೆ ಪೈಕಿ 2 ಗುಂಟೆ ಜಮೀನನ್ನು ನೊಂದಣಿ ಕ್ರಯ ಪತ್ರದ ಮೂಲಕ ಮಾರಾಟ ಮಾಡಿ ಅದೇ ದಿನ ಸ್ವಾಧೀನ ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ 2 ಗುಂಟೆ ಜಮೀನಿನ ಚೆಕ್ಕುಬಂದಿ ಪೂರ್ವ ಪಶ್ಚಿಮ ಮತ್ತು ಉತ್ತರಕ್ಕೆ ರಾಮಚಂದ್ರ ರವರ ಜಮೀನು, ದಕ್ಷಿಣಕ್ಕೆ ಕೊಂಡಪ್ಪ ರವರ ಸ್ವತ್ತು ಎಂದರೆ ಸರಿಯಲ್ಲ. ನನ್ನ ತಂದೆ ಅವಿಧ್ಯಾವಂತ. ನನ್ನ ಚಿಕಪ್ಪ ರಾಮಚಂದ್ರರೆಡ್ಡಿ ವಿಧ್ಯಾಭ್ಯಾಸ ಮಾಡಿಲ್ಲ.

**6.** ದಿಃ 1.12.1981 ರಂದು ನನ್ನ ಚಿಕ್ಕಪ್ಪ ರಾಮಚಂದ್ರ ರೆಡ್ಡಿ ಮತ್ತು ಆದಿನಾರಾಯಣರೆಡ್ಡಿ ರವರ ಮಧ್ಯೆ ಕರಾರು ಆಗಿತ್ತು ಎಂದರೆ ಸರಿಯಲ್ಲ. ಸರ್ವೇ ನಂ. 47/2 ರಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪರವರಿಗೆ ಇರುವ 1/5 ನೇ ಹಕ್ಕನು ಬಿಟ್ಟುಕೊಟ್ಟು

2500/- ರೂಗಳನ್ನು ಪಡೆದು ಹಕ್ಕು ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಒಪ್ಪಂದದ ಪ್ರಕಾರ ಆದಿನಾರಾಯಣರೆಡ್ಡಿ ರವರು ನೊಂದಣಿ ಮಾಡಿಸಿಕೊಟ್ಟದು ನನ್ನ ತಂದೆ ನೊಂದಣಿ ಮಾಡಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದೇ ದಿನ ನನ್ನ ತಂದೆ ಚಿಕ್ಕಪ್ಪರವರು 11 ನೇ ಪ್ರತಿವಾದಿಗೆ ಸ್ವಾಧೀನ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಕ್ರಯ ಪತ್ರದ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ಕರಾರು ಪತ್ರಕ್ಕೆ ನನ್ನ ತಂದೆ , ನನ್ನ ಚಿಕ್ಕಪ್ಪ ಮತ್ತು ಗೌರಕ್ಕಗಾರಿ ಬೈಯ್ಯಪ್ಪರೆಡ್ಡಿ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಕರಾರಿನ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ.

**7.** 12 ನೇ ಪ್ರತಿವಾದಿಯವರ ತಂದೆ ಮತ್ತು ಬಿ ವಿ ರಾಮಚಂದ್ರ ರೆಡ್ಡಿ ರವರು ಒಂದೇ ಕುಟುಂಬದಲ್ಲಿ ಇದ್ದಾರೆ ಎಂದರೆ ಸರಿ. ವೆಂಕಟಶಿವರೆಡ್ಡಿ ಮತ್ತು ಬಿ ವಿ ಸೂರ್ಯನಾರಾಯಣರೆಡ್ಡಿ ಒಟ್ಟಿಗೆ ಇರಲಿಲ್ಲ ಎಂದರೆ ಸರಿಯಲ್ಲ. 20 ವರ್ಷಗಳ ಹಿಂದೆ ಸೂರ್ಯನಾರಾಯಣರೆಡ್ಡಿ ಮತ್ತು ಶಿವರೆಡ್ಡಿ ರವರು ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ಅವರ ಭಾಗ ಅವರು ಪಡೆದುಕೊಂಡಿದ್ದಾರೆ ಎಂದರೆ ಸರಿ. ಗಂಗಪ್ಪನ ಮಕ್ಕಳು ವಿಭಾಗ ಮಾಡಿಕೊಂಡು ಮುಟೇಶನ್ 4/94-95 ರಂತೆ 1/5 ಶೇರ್ ಅನ್ನು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**8**. ಸರ್ವೇ ನಂ 47/2 ರಲ್ಲಿ 12 ನೇ ಪ್ರತಿವಾದಿ ಹೆಂಡತಿ ಚಂದ್ರಕಲಾ ರವರಿಗೆ ಬಸವ ಯೋಜನೆ ಅಡಿ ಮನೆಯು ಮಂಜೂರಾಗಿದ್ದು ಅದಕ್ಕೆ 4 ಗುಂಟೆ ಜಮೀನಿನಲ್ಲಿ ಪಾಯ ಹಾಕಿದ್ದಾರೆ ಎಂದರೆ ಪಾಯ ಹಾಕಿದ್ದಾರೆ. ಸರ್ವೇ ನಂ 47/2 ರಲ್ಲಿ ಆರ್ ಸೂರ್ಯ ನಾರಯಣರೆಡ್ಡಿ ರವರಿಗೆ ಶಿವರೆಡ್ಡಿ ರವರು 6 ಗುಂಟೆ ಜಮೀನನ್ನು ನೊಂದಣಿ ಮಾಡಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನರಸಿಂಹರೆಡ್ಡಿ ರವರ ಮಗ ಆರ್ ಸೂರ್ಯ ನಾರಯಣರೆಡ್ಡಿ ರವರು ಈ ದಾವಾದಲ್ಲಿ ಪಕ್ಷಕಾರರಿಲ್ಲ ಎಂದರೆ ಸರಿ. 11 ಕಮತ್ತು 12 ನೇ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಪ್ರತಿವಾದಿ 6, 7, 8 ಮತ್ತು 10 ನೇ ಪ್ರತಿವಾದಿ ಪರ ವಕೀಲರು ಗೈರು ಇರುವುದರಿಂದ ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

**ಮರು ವಿಚಾರಣೆ ঃঃ ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ. ,
ಬಾಗೇಪಲ್ಲಿ